# ಸ್ಥಳೀಯ ಪ್ರಭುತ್ವಗಳು ಮತ್ತು ವಸಾಹತುಶಾಹಿ ದಾಖಲೆಗಳು (ಸಶಸ್ತ್ರ ಬಂಡಾಯಗಳನ್ನು ಅನುಲಕ್ಷಿಸಿ)

ಎ.ಬಿ. ವಗ್ಗರ
ಸಹ ಪ್ರಾಧ್ಯಾಪಕರು, ಎಸ್.ಐ.ಎಸ್.ವೈ. ಸರಕಾರಿ ಪ್ರಥಮ ದರ್ಜೆ ಕಾಲೇಜು, ರಾಮದುರ್ಗ.

DOI: https://doi.org/10.5281/zenodo.18008013

## ABSTRACT:

ವಸಾಹತುಶಾಹಿ ಆಡಳಿತದ ಕಾಲದಲ್ಲಿ ರೂಪಗೊಂಡ ದಾಖಲೆಗಳು ಸ್ಥಳೀಯ ಪ್ರಭುತ್ವಗಳು, ಆಡಳಿತ ವ್ಯವಸ್ಥೆಗಳು ಮತ್ತು ಸಾಮಾಜಿಕ–ಆರ್ಥಿಕ ಸಂಬಂಧಗಳನ್ನು ಹೇಗೆ ಪ್ರತಿನಿಧಿಸುತ್ತವೆ ಎಂಬುದನ್ನು ವಿಮರ್ಶಾತ್ಮಕವಾಗಿ ವಿಶ್ಲೇಷಿಸುತ್ತದೆ. ವಸಾಹತುಶಾಹಿ ದಾಖಲೆಗಳನ್ನು ಸಾಮಾನ್ಯವಾಗಿ ಅಧಿಕೃತ ಮೂಲಗಳೆಂದು ಪರಿಗಣಿಸಿದರೂ ಅವುಗಳಲ್ಲಿ ವಸಾಹತುಶಾಹಿ ಅಧಿಕಾರದ ದೃಷ್ಟಿಕೋನ, ರಾಜಕೀಯ ಉದ್ದೇಶಗಳು ಮತ್ತು ಸ್ಥಳೀಯ ಧ್ವನಿಗಳ ನಿರ್ಲಕ್ಷ್ಯ ಅಡಗಿರುವುದನ್ನು ಈ ಲೇಖನ ಸ್ಪಷ್ಟಪಡಿಸುತ್ತದೆ. ಸ್ಥಳೀಯ ಆಡಳಿತಗಾರರು, ಸಂಸ್ಥೆಗಳು ಮತ್ತು ಸಮುದಾಯಗಳು ವಸಾಹತುಶಾಹಿ ಶಕ್ತಿಯೊಂದಿಗೆ ನಡೆಸಿದ ಪ್ರತಿರೋಧ ಮತ್ತು ಸಹಕಾರದ ರೂಪಗಳನ್ನು ಈ ಲೇಖನ ಪ್ರತಿಪಾದಿಸುವುದರ ಮೂಲಕ ಇತಿಹಾಸ ಲೇಖನದಲ್ಲಿ ವಸಾಹತುಶಾಹಿ ದಾಖಲೆಗಳ ಮಿತಿಗಳು ಮತ್ತು ಸಾಧ್ಯತೆಗಳನ್ನು ಗುರುತಿಸುವ ಮೂಲಕ ಸ್ಥಳೀಯ ಅನುಭವಗಳನ್ನು ಪುನರ್ ವ್ಯಾಖ್ಯಾನಿಸುವ ಅಗತ್ಯವಿದೆ ಎಂಬುದನ್ನು ಈ ಲೇಖನ ಒತ್ತಿಹೇಳುತ್ತದೆ.

## KEYWORDS:

ಸ್ಥಳೀಯ ಪ್ರಭುತ್ವಗಳು, ವಸಾಹತುಶಾಹಿ ಆಡಳಿತ, ವಸಾಹತುಶಾಹಿ ದಾಖಲೆಗಳು, ಅಧಿಕಾರ, ಪ್ರಭುತ್ವ.

## ಪ್ರಸ್ತಾವನೆ:

ಎಲ್ಲಾ ಕಾಲಘಟ್ಟಗಳಲ್ಲಿ ಬಲಾಢ್ಯ ಸಾಮ್ರಾಜ್ಯಗಳಿಗೆ ಬೆನ್ನೆಲುಬಾಗಿ ನಿಂತ ಸ್ಥಳೀಯ ಪಾಳೆಪಟ್ಟುಗಳು ವಿಜಯನಗರ, ಆದಿಲ್‌ಶಾಹಿ, ಮತ್ತು ಮರಾಠರ ಆಳ್ವಿಕೆಯ ಸಂದರ್ಭದಲ್ಲಿ ಮತ್ತು ನಂತರದ ಅವಧಿಯಲ್ಲಿ ಪ್ರಭುತ್ವಗಳ ಸ್ವರೂಪ ಪಡೆದುಕೊಳ್ಳಲಾರಂಭಿಸಿದವು. ಆದರೆ, ಪ್ರಬಲ ರಾಜ ಪ್ರಭುತ್ವಗಳ ಅಧೀನದಲ್ಲಿಯೇ ಆಳ್ವಿಕೆ ನಡೆಸಿದವು. ಸಾಮಾನ್ಯವಾಗಿ ಇವುಗಳನ್ನು ಸಂಸ್ಥಾನ, ದೇಶಗತಿ, ಸರಂಜಾಮ್, ಫೌಜ್ ಸರಂಜಾಮ್ ಮುಂತಾಗಿ ಕರೆಯಲಾಗಿವೆ. ವಸಾಹತುಶಾಹಿ ಅವಧಿಯಲ್ಲಿಯೂ ಈಸ್ಟ್ ಇಂಡಿಯಾ ಕಂಪನಿಗೆ ವಿಧೇಯರಾಗಿ ಉಳಿದವು. ಇವುಗಳಲ್ಲಿ ಕೆಲವು ಬ್ರಿಟಿಷ್ ನೀತಿಗಳನ್ನು ವಿರೋಧಿಸಿ ಬಂಡೆದ್ದವು.

ಪ್ರಾರಂಭದ ವಸಾಹತುಶಾಹಿ ವಿರೋಧ ದಂಗೆಗಳನ್ನು ಸ್ಥೂಲವಾಗಿ ನೋಡಿದಾಗ, ಮೊದಲ ಹಂತದಲ್ಲಿ–ಸಾಂಬಾರ ಪದಾರ್ಥ, ಹತ್ತಿ, ಅಫೀಮು ಮುಂತಾದ ವಸ್ತುಗಳನ್ನು ಭಾರತದಿಂದ ಬೇರೆ ಬೇರೆ ದೇಶಗಳಿಗೆ ರಫ್ತು ಮಾಡುವಲ್ಲಿ ಮಧ್ಯವರ್ತಿಯಾಗಿ ಲಾಭ ಪಡೆಯುತ್ತಿದ್ದ ಬ್ರಿಟಿಷ್ ಈಸ್ಟ್ ಇಂಡಿಯಾ ಕಂಪನಿ(ಅಥವಾ ಇಂಗ್ಲಿಷರು)ಯು ತನ್ನ ಸ್ವಹಿತಾಸಕ್ತಿ ಸಾಧನೆಗೆ ಸ್ಥಳೀಯ ಪ್ರಭುತ್ವಗಳ ಆಂತರಿಕ ಕಲಹಗಳನ್ನು ಬಳಸಿಕೊಂಡು ಸೈನಿಕ ಕಾರ್ಯಾಚರಣೆಗೆ ಇಳಿಯಿತು. ಈ ಕಾಲಘಟ್ಟದಲ್ಲಿ ಕೇವಲ ತಮ್ಮ ವ್ಯಾಪಾರಿ ಉದ್ದೇಶ ಸಾಧನೆಗಾಗಿ ಸ್ಥಳೀಯ ಆಳರಸರ ಸಹಾಯಕ್ಕಾಗಿ ಸೈನ್ಯ ಬಳಕೆ ಸೀಮಿತಗೊಂಡಿತ್ತು. ಇನ್ನೊಂದೆಡೆ ಬ್ರಿಟಿಷರನ್ನು ತಮ್ಮ ಸಹಾಯಕ್ಕಾಗಿ ಬಳಸಿಕೊಳ್ಳುತ್ತಿದ್ದೇವೆ ಎಂಬ ಸೀಮಿತ ಮನೋಭೂಮಿಕೆಯನ್ನು ಭಾರತೀಯರು

ಹೊಂದಿದ್ದರು. ಎರಡನೆಯ ಹಂತದಲ್ಲಿ–ಇಂಗ್ಲೆಂಡಿನ ಕಾರ್ಖಾನೆಗಳ ಉತ್ಪಾದಿತ ವಸ್ತುಗಳಿಗೆ ಮಾರುಕಟ್ಟೆಯಾಗಿ ಭಾರತವನ್ನು ಬಳಸಿಕೊಳ್ಳಲಾರಂಭಿಸಿತು. ಈ ಹಂತದಲ್ಲಿ ವಸಾಹತುಶಾಹಿ ಪ್ರಭುತ್ವದ ವಿಸ್ತರಣೆ ಮತ್ತು ಅದನ್ನು ಏಕೀಕೃತಗೊಳಿಸಲು ಸೈನ್ಯವನ್ನು ಬಳಸಿತು ಜೊತೆಗೆ ತನ್ನ ನೀತಿಗಳನ್ನು ಸಹ ಬದಲಾಯಿಸಿಕೊಂಡಿತು. ಇವುಗಳಿಂದಾಗಿ ಭಾರತೀಯ ಅರಸರು ತಮ್ಮ ಅಸ್ತಿತ್ವಕ್ಕಾಗಿ ಬ್ರಿಟಿಷರ ವಿರುದ್ಧ ಸಂಘರ್ಷಕ್ಕೆ ಇಳಿಯುವಂತಾಯಿತು. ಈ ಸಂಘರ್ಷಗಳನ್ನು ಗಮನಿಸಿದಾಗ– ಕಂದಾಯ ವಸೂಲಿ ಅಧಿಕಾರಕ್ಕಾಗಿ ಸಿಂದಗಿ (1824)ಯಲ್ಲಿ ನಡೆದ ದಿವಾಕರ ದೀಕ್ಷಿತರ ದಂಗೆ, ಸಂಸ್ಥಾನದ ಅಸ್ತಿತ್ವ ಮತ್ತು ದತ್ತು ಪಡೆಯಲು ಅನುಮತಿಗಾಗಿ ಕಿತ್ತೂರು (1824) ಮತ್ತು ನರಗುಂದ (1858) ಸಂಸ್ಥಾನಗಳು ಬಂಡಾಯ ಹೂಡಿದವು. ತಮ್ಮ ಪ್ರಭುತ್ವದ ಸ್ವಾಮಿನಿಷ್ಠೆಗಾಗಿ ಮತ್ತು ಕಿತ್ತೂರಿನ ಅಧಿಕಾರ ಮರುಸ್ಥಾಪನೆಗಾಗಿ ಸಂಗೊಳ್ಳಿ ರಾಯಣ್ಣ (1830) ನಂತರ ಆತನ ಸಹಚರರ (1831–1857) ದಂಗೆಗಳು ಮಹತ್ವದ್ದಾಗಿವೆ.

ಪ್ರಸ್ತುತ ಲೇಖನದಲ್ಲಿ ಕೇವಲ ಕಿತ್ತೂರು ಸಂಸ್ಥಾನದ ದಂಗೆಗಳನ್ನು ಕೇಂದ್ರೀಕರಿಸಿ ಸ್ಥೂಲವಾಗಿ ಚರ್ಚಿಸುವ ಪ್ರಯತ್ನವನ್ನು ಮಾಡಲಾಗಿದೆ.

ಕಿತ್ತೂರು ಸಂಸ್ಥಾನದಲ್ಲಿನ ದಂಗೆಗಳು: ಹಿರೇಮಲ್ಲಶೆಟ್ಟಿ ಮತ್ತು ಚಿಕ್ಕಮಲ್ಲಶೆಟ್ಟಿ ಇವರಿಂದ ಸ್ಥಾಪನೆಗೊಂಡು, ಮೊದಲು ಸಂಪಗಾಂವ ನಂತರ ಕಿತ್ತೂರನ್ನು ತನ್ನ ಕೇಂದ್ರಸ್ಥಾನವನ್ನಾಗಿ ಮಾಡಿಕೊಂಡು ಆಳ್ವಿಕೆ ನಡೆಸಿತು. ಕಿತ್ತೂರು ಸಂಸ್ಥಾನ–ಆದಿಲ್‌ಶಾಹಿ, ಮರಾಠಾ, ಪೇಶ್ವೆ ಮತ್ತು ಬ್ರಿಟಿಷ್ ಪ್ರಭುತ್ವಗಳಿಗೆ ಬೆನ್ನೆಲುಬಾಗಿ ನಿಂತು, ತನ್ನ ಅಸ್ತಿತ್ವವನ್ನು ಗಟ್ಟಿಗೊಳಿಸಿಕೊಳ್ಳುತ್ತಾ ಸಾಗಿತ್ತು. ನಂತರ ಕಿತ್ತೂರು ದೇಸಾಯಿ ಶಿವಲಿಂಗರುದ್ರ ಸರ್ಜನಿಗೆ ಗಂಡು ಸಂತಾನ ಇಲ್ಲದ್ದರಿಂದ ದತ್ತು ಪಡೆಯುವುದಕ್ಕಾಗಿ ನಡೆದ ಚರ್ಚೆ 1824ರಲ್ಲಿ ಬ್ರಿಟಿಷರ ವಿರುದ್ಧ ದಂಗೆಯ ಸ್ವರೂಪ ಪಡೆದು ಸಂಸ್ಥಾನ ಅವಸಾನ ಹೊಂದಿತು. ದೇಸಾಯಿಯ ಮರಣ–ದತ್ತು ಕಾರ್ಯಕ್ರಮ ಮತ್ತು ವಂಶಾವಳಿಯ ಸತ್ಯತೆ–ಸಂಸ್ಥಾನದ ಆಂತರಿಕ ಆಡಳಿತ ಮುಂತಾದವುಗಳ ಬಗ್ಗೆ ಥ್ಯಾಕರೆಯಲ್ಲಿ ಮೂಡಿದ ಸಂದೇಹಗಳು, ಅವುಗಳ ವಿಚಾರಣೆ–ಸಂಸ್ಥಾನವನ್ನು ನಿಯಂತ್ರಿಸುವುದಕ್ಕಾಗಿ ಥ್ಯಾಕರೆ ಕೈಗೊಂಡ ಕ್ರಮಗಳು, ಅವುಗಳಿಂದ ಕಿತ್ತೂರು ಸಂಸ್ಥಾನಿಕರಲ್ಲಿ ಮೂಡಿದ ಅಸ್ಥಿರ ಭಾವನೆ ಮತ್ತು ತಮ್ಮ ಅಸ್ತಿತ್ವ ಉಳಿಕೆಗಾಗಿ ಅವರು ಸರಕಾರಕ್ಕೆ ಮಾಡಿದ ಭಿನ್ನಹಗಳು–ಅದಕ್ಕೆ ಗವರ್ನರ್ ಮತ್ತು ಆತನ ಕೌನ್ಸಿಲಿನ ಸದಸ್ಯರ ಅಭಿಪ್ರಾಯಗಳು–ಇವೆಲ್ಲವುಗಳು ಚರ್ಚಾ ಹಂತದಲ್ಲಿರುವಾಗಲೇ ದಂಗೆ ಸ್ಫೋಟಗೊಂಡಂತೆ ಕಾಣುತ್ತದೆ.

ಪರಸ್ಪರರ ನಡುವಿನ ಸಂಧಾನದ ಪ್ರಯತ್ನಗಳು ವಿಫಲವಾಗಿ, ಸೈನ್ಯ ಜಮಾವಣೆಗೊಂಡು 23ನೇ ಅಕ್ಟೋಬರ್ 1824ರಂದು ಕದನ ಸ್ಫೋಟಗೊಂಡಿತು. ಕಲೆಕ್ಟರ್ ಥ್ಯಾಕರೆಯನ್ನು ಓರ್ವ ಸೈನಿಕ ಗುಂಡಿಟ್ಟು ಕೊಂದನು. ಕ್ಯಾಪ್ಟನ್ ಬ್ಲ್ಯಾಕ್, ಕ್ಯಾಪ್ಟನ್ ಸಿವೆಲ್ ಮತ್ತು ಲೆಫ್ಟಿನೆಂಟ್ ಡೈಟನ್ ತೀವ್ರವಾಗಿ ಗಾಯಗೊಂಡರು. ನಂತರ ಬ್ಲ್ಯಾಕ್, ಡೈಟನ್ ಮರಣ ಹೊಂದಿದರು ಮತ್ತು ಸಿವೆಲ್ ತನ್ನ ತಾಯ್ನಾಡಿಗೆ ಮರಳಿದ ನಂತರ ಯುದ್ಧದ ಭಯದ ಕನವರಿಕೆಯಲ್ಲಿಯೇ ಮರಣ ಹೊಂದಿದನು. ಸ್ಟೀವನ್ಸನ್, ಸರ್ ವಾಲ್ಟರ್ ಈಲಿಯಟ್ ಮತ್ತು ಹಲವಾರು ಸೈನಿಕರು, ಬ್ರಿಟಿಷ್ ಹೆಂಗಸರು ಮತ್ತು ಮಕ್ಕಳು ಕಿತ್ತೂರಿನ ಸೆರೆಯಾಳುಗಳಾದರು. ಚೆನ್ನಮ್ಮ ಸೆರೆಯಾದ ಹೆಂಗಸರು ಮತ್ತು ಮಕ್ಕಳನ್ನು ಬಹಳ ಔದಾರ್ಯದಿಂದ ಕಂಡಿದ್ದಕ್ಕಾಗಿ ಕೊನೆಯ ಸಂದರ್ಭದಲ್ಲಿ ಚೆನ್ನಮ್ಮಳಿಗೆ ಪಿಂಚಣಿ ನಿಗದಿಗೊಳಿಸುವಾಗ–ಚೆನ್ನಮ್ಮಳಿಗೆ ನೀಡುವ ಪಿಂಚಣಿ ಉದಾರವಾಗಿರಬೇಕೆಂದು ಬ್ರಿಟಿಷ್ ಅಧಿಕಾರಿ ಸರಕಾರಕ್ಕೆ ಪತ್ರ ಬರೆದಿದ್ದನ್ನು ಕಾಣಬಹುದು. ಬ್ರಿಟಿಷರ ಸೈನಿಕ ಟೆಂಟುಗಳನ್ನು ಸ್ಥಳೀಯರು ಲೂಟಿ ಮಾಡಿದರು. ಪಿಸ್ತೂಲ್, ರೈಫಲ್ ಮುಂತಾಗಿ ಲೂಟಿಯಾದ ವಸ್ತುಗಳ ಒಟ್ಟು ಮೌಲ್ಯ 12382–9–0 (ಪೌಂಡ್+ಶಿಲ್ಲಿಂಗ್+ಪೆನ್ಸ್).

ಈ ಘಟನೆಯಲ್ಲಿ ಕಿತ್ತೂರಿನವರು ವಿಜಯ ಗಳಿಸಿದರು. 1. ಗುರುಸಿದ್ದಪ್ಪ 2. ಗುರುಪುತ್ರ ವೀರಪ್ಪ 3. ಜಮಾದರಖಾನ್ ಮಲ್ಲಪ್ಪ 4. ಸುಬೇದಾರ ಮಲ್ಲಪ್ಪ 5. ತಿಮ್ಮಪ್ಪ ದಪ್ತುರನೀಸ್ 6. ಅಗಸೆಬಾಗಿಲ ರಾಮಪ್ಪ 7. ಬಾಲಪ್ಪ ಕೋಟಗಿ 8. ನರಸಿಂಗರಾವ್ ಮುಜುಂದಾರ್ 9. ಬಸಲಿಂಗಪ್ಪ ಜಮಾದರಖಾನೆ 10. ರಾಯಣ್ಣ ರೋಗನ್ನವರ (ಸಂಗೊಳ್ಳಿ) 11. ಶೇಖ್ ಜಂಗ್ಲೀ ಜಮಾದಾರ್ 12. ಬಾಬೂಲ ಜಮೇದಾರ ಪೀಂಡಾರಿ ಬಂಧಿಸಿ ನಂತರ ಬಿಡುಗಡೆ ಮಾಡಲಾಯಿತು. ತಲೆಮರೆಸಿಕೊಂಡವರನ್ನು ಹಿಡಿಯಲು ಬಹುಮಾನ ಘೋಷಿಸಲಾಯಿತು. ಚೆನ್ನಮ್ಮ, ವಿಧವೆಯಾದ ಶಿವಲಿಂಗರುದ್ರ ಸರ್ಜನ ಹೆಂಡತಿ ವೀರವ್ವ, ಅವಳ ಮಡಿದ ಮಗ ಶಿವಬಸವರಾಜನ ಪತ್ನಿ ವಿಧವೆ ಜಾನಕಿ ಇವರನ್ನು ಬೈಲಹೊಂಗಲದಲ್ಲಿ ರಾಜಕೀಯ ಕೈದಿಗಳನ್ನಾಗಿ ಇಡಲಾಯಿತು.

ನಂತರ ಯುದ್ಧ ಮುಂದುವರಿದು 5ನೇ ಡಿಸೆಂಬರ್ 1824ರಂದು ಕಿತ್ತೂರು ಕೋಟೆ ಬ್ರಿಟಿಷರ ವಶವಾಯಿತು. ಬ್ರಿಟಿಷರು ಒಂದು ನಗರವನ್ನು ವಶಪಡಿಸಿಕೊಂಡ ನಂತರ ಅದನ್ನು ಸಂಪೂರ್ಣವಾಗಿ ಲೂಟಿ ಮಾಡುತ್ತಿದ್ದರು. ಹಾಗೆಯೇ ಕಿತ್ತೂರಿನ ಸಂಪತ್ತಿನ 'ಲೂಟಿಗಾಗಿ ಲೈಸೆನ್ಸ್ ಹೊಂದಿದ ಲೂಟಿಕೋರ'ರನ್ನು (Prize Agents) ನೇಮಿಸಿದರು. ಸೈನ್ಯಾಧಿಕಾರಿಗಳನ್ನೇ ಪ್ರೈಜ್ ಏಜೆಂಟರನ್ನಾಗಿ ನೇಮಿಸುತ್ತಿದ್ದರು. ಕಿತ್ತೂರನ್ನು ಲೂಟಿ ಮಾಡಲು ಮದ್ರಾಸ್ ಪ್ರಾಂತದ ಪರವಾಗಿ 4ನೇ ರೆಜಿಮೆಂಟಿನ ಲಘು ಪದಾತಿ ದಳದ ಲೆಫ್ಟಿನೆಂಟ್ ಕರ್ನಲ್ ಮಿ.ಮ್ಯಾಕ್ಲಿಯೋಡ್, ಬಾಂಬೆಯ ಮಹಾಪ್ರಭುವಿನ (His Majesty's) ಸೇವೆಯ ಪರವಾಗಿ 46ನೇ ರೆಜಿಮೆಂಟ್‌ನ ಪದಾತಿ ದಳದ ಕ್ಯಾಪ್ಟನ್ ನೈರ್ ಮತ್ತು ಬಾಂಬೆ ಲಘು ಪದಾತಿ ದಳದ ಕ್ಯಾಪ್ಟನ್ ಜಾಮಿಸನ್ ಇವರನ್ನು ನೇಮಿಸಲಾಯಿತು. ಲೂಟಿ ಮಾಡಿದ ಸಂಪತ್ತನ್ನು ಸಾರ್ವಜನಿಕ ಹರಾಜಿನ ಮೂಲಕ ಮಾರಾಟ ಮಾಡಿ, ಬಂದ ಹಣವನ್ನು ಖಜಾನೆಗೆ ಸಲ್ಲಿಸಿದರು. ಲೂಟಿಯಲ್ಲಿನ ನಾಣ್ಯಗಳನ್ನು ಶ್ರಾಫ್ (ಹಣ ವಿನಿಮಯಕಾರ) ಪರೀಕ್ಷಿಸಿ ಮೌಲ್ಯವನ್ನು ನಿಗದಿ ಮಾಡಿದರೆ, ವಸ್ತುಗಳನ್ನು ವ್ಯಾಪಾರಿಗಳು ಮೌಲ್ಯಮಾಡುತ್ತಿದ್ದರು. ಬಂಗಾರದ ನಾಣ್ಯ ಮತ್ತು ವಸ್ತುಗಳನ್ನು ಇಂಗ್ಲೆಂಡ್‌ಗೆ ಕಳುಹಿಸಲು ಸ್ಪಷ್ಟ ನಿರ್ದೇಶನ ನೀಡಲಾಗಿತ್ತು. ಲೂಟಿಯಲ್ಲಿ ನಾಣ್ಯಗಳು, ಜಾನುವಾರುಗಳು, ಕುದುರೆಗಳು ಮುಂತಾಗಿ ಇತರೆ ವಸ್ತುಗಳಿದ್ದವು. ಒಟ್ಟು 9,37,452–1–99 (ರೂಪಾಯಿ+ಪೈಸೆ+ಆಣೆ) ರೂಪಾಯಿಗಳು ಲೂಟಿಯಿಂದ ಬಂದ ಮೊತ್ತವಾಗಿದೆ. ಬೇರೆ ಬೇರೆ ಹಣದ ಮೌಲ್ಯಗಳಲ್ಲಿ ಲೂಟಿಯಾದ ವಸ್ತುಗಳ ದರಗಳನ್ನು ನಿಗದಿಪಡಿಸಲಾಗಿದೆ, ಉದಾಹರಣೆಗೆ–ಧಾರವಾಡ ಪಗೋಡಾ, ಧಾರವಾಡ ಸ್ಟಾರ್ ಪಗೋಡಾ, ಕಂಪನಿ ರೂಪಾಯಿ, ಶಾಪೂರಿ ರೂಪಾಯಿ, ಸೋಲಾಕಿ ಕಂಪನಿ ರೂಪಾಯಿ, ಸುರತ್ ರೂಪಾಯಿ, ಅರ್ಧ ಸ್ಟಾರ್ ಪಗೋಡಾ, ಮೈಸೂರು ಸ್ಟಾರ್ ಪಗೋಡ, ಬೆಳ್ಳಿ ಪನಾಮಾ ಇತ್ಯಾದಿ. ಈ ವಸ್ತುಗಳನ್ನು ಹರಾಜಿನಲ್ಲಿ ಹೆಬ್ಬಳ್ಳಿಯ ತಾನಾಜೀ ಸಾಹುಕಾರ, ಧಾರವಾಡದ ಗೋವಿಂದ ನಾಯಿಕ ಸಾಹುಕಾರ, ಮಾಳಗೇರಿ ನಾಯಿಕ–ಹೆಬ್ಬಳ್ಳಿ, ರಂಗರಾವ್ ಮುನ್ಶಿ, ಹನುಮಂತರಾವ್ ಮುನ್ಶಿ, ಸದಾಶಿವಪಂತ ಬಾಪ್ಟೆ, ಮುಧೋಳ್‌ದ ರಾಜಾ ಮುಂತಾದವರು ಕೊಂಡುಕೊಂಡರು.

1825ರ ನಂತರ ಮತ್ತೆ ಬಂಡಾಯಗಾರರು ಸಂಘಟಿತಗೊಳ್ಳತೊಡಗಿದ್ದರು. ಇಲ್ಲಿನ ವ್ಯಾಪಾರಿಗಳು ಮತ್ತು ರೈತರು–ಬರ್ಜರ್ (ಅಶ್ವ ಮತ್ತು ಆಯುಧಗಳ ಒಡೆಯನಾಗಿರದೆ–ಪ್ರಭುತ್ವ ಅಥವಾ ತನ್ನ ಮುಖಂಡ ನೀಡಿದ ಕುದುರೆಯನ್ನು ಹೊಂದಿದ ಅನಿಯಮಿತ ಅಶ್ವದಳದ ಸೈನಿಕ), ಸಿಲ್ಲಾದಾರ (ಆಯುಧಗಳನ್ನು ಹೊಂದಿದ ಸೈನಿಕ), ಹುಜೂರತ್ತಿ (ಕುದುರೆ ಸವಾರ) ಮತ್ತು ಕಟುಕ್‌ರನ್ನು ಕೂಡಿಸಿಕೊಂಡು ದೊಂಬಿ ಎಬ್ಬಿಸುವ ಹವಣಿಕೆಯಲ್ಲಿದ್ದರು. ಇದಕ್ಕೆ

ಸಂಬಂಧಿಸಿದ ಪತ್ರಗಳು ಬಸವಂತರಾವ್‌ನ ಬಳಿ ಇದ್ದವು. ದಂಗೆಗೆ ಕೊಲ್ಹಾಪುರದ ರಾಜನ ಸಹಾಯ ಕೋರಲಾಗಿತ್ತು. ಈ ಬೆಳವಣಿಗೆಗಳನ್ನು ಪರಿಗಣಿಸಿ, ಕಿತ್ತೂರು, ಗರಗ ಮುಂತಾದ ಕಡೆಗಳಲ್ಲಿ ಬ್ರಿಟಿಷರು ಗಸ್ತು ಕ್ಯಾಂಪ್ ಹಾಕಿದರು ಮತ್ತು ಕಿತ್ತೂರು ಜಿಲ್ಲೆಯಲ್ಲಿ ಸಾಂದರ್ಭಿಕವಾಗಿ ಗಸ್ತು ತಿರುಗುವ ವ್ಯವಸ್ಥೆ ಮತ್ತು ಮೂರು ತಾಲೂಕುಗಳಲ್ಲಿ ಸೈನ್ಯ ಇರಿಸಿದರು. ಬೀಡಿ ಮತ್ತು ಸಂಪಗಾಂವ ತಾಲೂಕು ಕಚೇರಿಗಳನ್ನು ಸೈನ್ಯ ಪಡೆಯ ಕೇಂದ್ರಗಳಾಗಿ ಮಾರ್ಪಡಿಸಿದರು.

ಚೆನ್ನಮ್ಮ ಮೃತಳಾದ ನಂತರ ಬಿಟ್ಟು ಹೋದ ಆಸ್ತಿಯ ಮೌಲ್ಯ 61,283 ಬಾಂಬೆ ರೂಪಾಯಿ. ಇವಳಿಗೆ ವಾರಸುದಾರರು ಇಲ್ಲದ್ದರಿಂದ ಈ ಆಸ್ತಿಯನ್ನು ಸಾರ್ವಜನಿಕ ಹರಾಜು ಮಾಡಿದರು. ಅದರಲ್ಲಿ ಹಣ, ಆಭರಣ, ಚಿನ್ನ ಮತ್ತು ಬೆಳ್ಳಿಯ ವಸ್ತುಗಳು, ಒಂಟೆ, ಕುದುರೆ ಧಾನ್ಯ ಮುಂತಾದವು ರೂ. 61,283–02–13. ಇವಳಿಗೆ ನೀಡಲಾಗಿದ್ದ–ಅಂತ್ಯಕ್ರಿಯೆಯ ಬಟ್ಟೆಗಳು, ಉಡುವ ಬಟ್ಟೆಗಳು, ಕರಡಿಗೆ (ಲಿಂಗವನ್ನು ಇಡುವ ಗುಂಡಗಡಿಗೆ) ಮುಂತಾದವು–460–00–00. ಅವಳು ಮೃತಳಾದಾಗ–ಸಂಪ್ರದಾಯದಂತೆ ಅವಳಿಗಾಗಿ ಜನರ ಕೋರಿಕೆಯ ಮೇರೆಗೆ ನೀಡಲಾದ ಆಸ್ತಿ. ಲಿಂಗಾಯತರು ಧರಿಸುತ್ತಿದ್ದ ಚೌಕ್ (ಕರಡಿಗೆ), ಕುದುರೆ, ಎತ್ತು, ಪಾಲ್ಕಿ ಮುಂತಾದವು–1094–00–00. ಆ ಹಣದಲ್ಲಿ ಖರ್ಚಾದ (11,024–2–00) ಮೊತ್ತವನ್ನು ಕಳೆದು ಸರಕಾರಕ್ಕೆ ಭರಿಸಿದರು. ಹೀಗೆ ಕಿತ್ತೂರಿನವರಿಗೆ ಸಂಬಂಧಿಸಿದ ಸಂಪೂರ್ಣ ದ್ರವ್ಯವನ್ನು ಲೂಟಿ ಮಾಡಿದರು. 1824ರಲ್ಲಿ ಜರುಗಿದ ಕಿತ್ತೂರಿನ ಬಂಡಾಯದ ತರುವಾಯ ನಡೆದ ಚಟುವಟಿಕೆಗಳ ಬಗ್ಗೆ ಸರಕಾರಕ್ಕೆ ನೀಡಿದ ಸಾರಾಂಶವನ್ನು ಪತ್ರದಲ್ಲಿ ಈ ರೀತಿಯಾದ ವಿಷಯವನ್ನು ಕಾಣಬಹುದು.

“27ನೇ ಅಕ್ಟೋಬರ್ 1824ರಂದು ದಖ್ಖನ್ನಿನ ಕಮಿಷನರ್‌ನು ಕಿತ್ತೂರಿನಲ್ಲಿ ಸ್ಫೋಟಗೊಂಡ ಬಂಡಾಯ ಕುರಿತು ವರದಿ ಮಾಡಿದನು. ಅದರ ದಮನಕ್ಕಾಗಿ ಕ್ರಮಗಳನ್ನು ತೆಗೆದುಕೊಳ್ಳಲಾಯಿತು. ಇದು ಡಿಸೆಂಬರ್ 4ರಂದು ಆ ಕೋಟೆಯ ಶರಣಾಗತಿಯೊಂದಿಗೆ ಅಂತ್ಯಗೊಂಡಿತು ಮತ್ತು ಪ್ರಾಣ ಭಿಕ್ಷೆಯ ಷರತ್ತಿನೊಂದಿಗೆ ಬಂಡಾಯದ ಪ್ರಧಾನ ಮುಖಂಡರಲ್ಲಿ 12 ಜನರ ಶರಣಾಗತಿಯೂ ಆಯಿತು. ಸರಕಾರವು ಅವರ ಮುಂದಿನ ಕ್ರಮ ಕುರಿತು ಇತ್ಯರ್ಥ ಮಾಡುವವರೆಗೆ, ಅವರನ್ನು ಬೆಳಗಾವಿ ಕೋಟೆಯಲ್ಲಿ ಬಂಧಿಸಲಾಗಿದೆ. ಈ ಸಂದರ್ಭದಲ್ಲಿ ದಿವಂಗತ ದೇಸಾಯಿಯ ಕುಟುಂಬದ ಸ್ತ್ರೀಯರ ರಕ್ಷಣೆಗೆ ಎಲ್ಲ ಸಾಧ್ಯವಿದ್ದ ವ್ಯವಸ್ಥೆಗಳನ್ನು ಮಾಡಲಾಗಿದೆ ಮತ್ತು ಕಿತ್ತೂರು ಪ್ರದೇಶದ ವಶಪಡಿಸಿಕೊಳ್ಳುವ ಹಾಗೂ ಆಡಳಿತಕ್ಕೆ ಸಂಬಂಧಿಸಿದಂತೆ ದಿವಂಗತ ಥ್ಯಾಕರೆಯವರು ನೀಡಿದ ನಿರ್ದೇಶನಗಳನ್ನು ಕಾರ್ಯರೂಪಕ್ಕೆ ತರಲು ಮಿ. ಸ್ಟೀವನ್ಸನ್‌ರಿಗೆ ನಿರ್ದೇಶಿಸಲಾಗಿದೆ. ಇದೇ ಸಂದರ್ಭದಲ್ಲಿ ಪ್ರಮುಖ ಬಂಡಾಯಗಾರರಿಗೆ ಅತ್ಯಂತ ಉದಾರತೆಯನ್ನು ತೋರಲು ಮಿ. ಚಾಪ್ಲಿನ್‌ರಿಗೆ ನಿರ್ದೇಶಿಸಲಾಗಿತ್ತು, ಅವರ ಬಂಧನದ ಅವಧಿ ಮತ್ತು ಬಿಡುಗಡೆಯ ಸಮಯದಲ್ಲಿ ಪಡೆಯುವ ಜಾಮೀನಿನ ಕುರಿತಂತೆ ಅವರ ವಿವೇಚನೆಗೆ ಬಿಡಲಾಗಿದೆ. ಆದರೆ ಅವರನ್ನು ಅವಶ್ಯಕತೆಗಿಂತ ಹೆಚ್ಚಿನ ಸಮಯಕ್ಕೆ ಬಂದಿಸಿಡದೆ ದಂಗೆ ಮರುಕಳಿಸುವ ಅವಕಾಶಗಳನ್ನು ತಡೆಯಬೇಕು, ವಿಧವೆಯರಿಗೆ ಒಂದು ಉದಾರವಾದ ಭತ್ಯೆಯನ್ನು ನೀಡಲು ನಿರ್ದೇಶಿಸಲಾಗಿದೆ ಮತ್ತು ದಿವಂಗತ ದೇಸಾಯಿಯ ಸೇವಕರಿಗೆ ತಕ್ಕಮಟ್ಟಿಗೆ ವ್ಯವಸ್ಥೆಯನ್ನು ಮಾಡಬೇಕು, ಶೇತಸನದಿಗಳನ್ನು ಉಳಿಸಿಕೊಳ್ಳಬೇಕು ಮತ್ತು ಅವರಾದಿ ವೀರಪ್ಪ ಹಾಗೂ ಇನ್ನುಳಿದ ದೇಶಭ್ರಷ್ಟರನ್ನು ಕಿತ್ತೂರು ಕೋಟೆಯಿಂದ ಬಂಧಿಸುವ ಮತ್ತು ಮುಂದಿನ ಗಲಭೆಯ ಎಲ್ಲ ಬೀಜಗಳನ್ನು ಕಿತ್ತೆಸೆಯುವ ಎಲ್ಲ ಪ್ರಯತ್ನಗಳನ್ನು ಮಾಡಬೇಕು.

ಅದರಂತೆಯೇ 29ನೇ ಡಿಸೆಂಬರ್‌ಕ್ಕೆ ಮಿ. ಚಾಪ್ಲಿನ್‌ರು ಬರೆದ ಪತ್ರದ ಜೊತೆಯಿರುವ

ಹೇಳಿಕೆಯಲ್ಲಿ ಸಹಚರರಿಗೆ ಸೂಚಿಸಲಾಗಿರುವಂತೆ ದಿವಂಗತ ದೇಸಾಯಿಯ ವಿಧವೆಯರು ಹಾಗೂ ಹಿಂಬಾಲಕರಿಗೆ ವ್ಯವಸ್ಥೆ ಮಾಡಲಾಗಿದೆ. ಈ ಪ್ರಾಂತವು ಈಗ ಶಾಂತವಾಗಿದ್ದು, ಬಂಡಾಯವನ್ನು ಹತ್ತಿಕ್ಕಲು ಒಗ್ಗೂಡಿಸಿದ ಸೈನ್ಯವನ್ನು ತಮ್ಮ ಮೂಲ ಸ್ಥಾನಗಳಿಗೆ ತೆರಳಲು ಆದೇಶಿಸಲಾಗಿದೆ, ಯಾವುದಾದರೂ ಅಹಿತಕರ ಘಟನೆ ಸಂಭವಿಸಿದರೆ ಬೇಕಾಗುವ ಲಘು ಸೈನ್ಯವನ್ನು ಹೊರತುಪಡಿಸಲಾಗಿದೆ, ಸ್ಥಾನಿಕ ಪದಾತಿದಳದ ನಾಲ್ಕು ಕಂಪನಿಗಳನ್ನು ಕಿತ್ತೂರು ಕೋಟೆಯ ರಕ್ಷಣೆಗೆ ಬಿಡಲಾಗಿದೆ. ಶರಣಾದ ಕಿತ್ತೂರಿನ ಪ್ರಮುಖ ಬಂಡಾಯಗಾರರಲ್ಲಿ 5 ಜನರನ್ನು ಬಿಡುಗಡೆಗೊಳಿಸಬೇಕು ಮತ್ತು ಇನ್ನುಳಿದವರನ್ನು ಬಂಧನದಲ್ಲಿ ಮುಂದುವರಿಸುವಂತೆ ಪೊಲಿಟಿಕಲ್ ಏಜೆಂಟ್‌ರಿಗೆ ನೀಡಿರುವುದಾಗಿ ಈ ದಿನಾಂಕದಂದು (2ನೇ ಜನವರಿ 1825) ವಿಲಿಯಂ ಚಾಪ್ಲಿನ್ ವರದಿ ಮಾಡಿರುತ್ತಾರೆ.

ದೇಶಭ್ರಷ್ಟ ಬಂಡಾಯಗಾರ ಅವರಾದಿ ವೀರಪ್ಪನನ್ನು ಸೆರೆಹಿಡಿಯಲಾಗಿದೆ, ಅವನನ್ನು ಇನ್ನುಳಿದ ಬಂಧಿಗಳೊಂದಿಗೆ ಆ ಜಿಲ್ಲೆಯಲ್ಲಿ ಚಾಲ್ತಿ ಇರುವ ಅಪರಾಧಿ ದಂಡಸಂಹಿತೆಯ ಕಾನೂನಿನ್ವಯ ಸಾರ್ವಜನಿಕ ತಪ್ಪಿತಸ್ಥರಿಗೆ ನಡೆಸುವ ನ್ಯಾಯ ಪ್ರಕ್ರಿಯೆಗೆ ಒಳಪಡಿಸಬೇಕು.

ಈ ಅವಧಿಯಲ್ಲಿ ಕಿತ್ತೂರಿನ ಇಬ್ಬರೂ ದೇಸಾಯಿನಿಯರು ಎರಡು ಅರ್ಜಿಗಳನ್ನು ಸಲ್ಲಿಸಿದ್ದಾರೆ, ಹಣದ ರೂಪದಲ್ಲಿ ಭತ್ಯೆ ನೀಡುವ ಬದಲಾಗಿ ಅವರ ಇನಾಂ ಹಳ್ಳಿಗಳನ್ನು ಉಳಿಸಿಕೊಳ್ಳಲು ಬಿಡುವಂತೆ ಮನವಿ ಮಾಡಿದ್ದಾರೆ ಮತ್ತು ಕಿತ್ತೂರಿನಿಂದ ಅವರನ್ನು ಹೊರಹಾಕುವ ಸಮಯದಲ್ಲಿ ಅವರಿಂದ ಬಾಕಿ ಇದೆ ಎಂದು ಆರೋಪಿಸಿದ ರೂ. 14,649ಗಳ ಸಾಲದಿಂದ ಮುಕ್ತಿ ಹೊಂದಲು ದಾರಿ ಮಾಡಿಕೊಡಬೇಕೆಂದು ಮನವಿ ಮಾಡಿದ್ದಾರೆ. ಈ ಹಿಂದಿನ ಬೇಡಿಕೆಯನ್ನು ನಿರಾಕರಿಸಲಾಗಿತ್ತು ಆದರೆ, ನ್ಯಾಯಯುತವಾದ ಕಾರಣಗಳಿಗೆ ವ್ಯಯ ಮಾಡಿದ ಹಣದ ಬಾಬತ್ತನ್ನು ಪಾವತಿ ಮಾಡಲು ಅನುಮತಿಸಲು ಸರಕಾರವು ಒಪ್ಪಿಕೊಂಡಿದೆ.

ಈ ದಿನಾಂಕದಂದು (13ನೇ ಮಾರ್ಚ್ 1825), ಕಮಿಷನರ್ ಇವರಿಗೆ ಧಾರವಾಡದ ಪೊಲಿಟಿಕಲ್ ಏಜಂಟ್ ಕಳುಹಿಸಿದ ವರದಿಯಲ್ಲಿ–ರಾಜಕೀಯ ದೃಷ್ಟಿಯಿಂದ ಕಿತ್ತೂರಿನ ನೆರೆಹೊರೆಯಲ್ಲಿ ಒಂದು ಖಾಯಂ ಸೈನಿಕ ಠಾಣೆಯನ್ನು ಸ್ಥಾಪಿಸುವುದು ಸೂಕ್ತ ಎಂದು ತಿಳಿಸಲಾಗಿತ್ತು. ಮಿ. ಬಬರ್ ಅವರು ಭಾವಿಸುವಂತೆ ಈ ಹೊಸದಾಗಿ ಆಕ್ರಮಿಸಿಕೊಂಡ ಪ್ರದೇಶದಲ್ಲಿ ನಮ್ಮ ಪ್ರಭುತ್ವದ ವಿಭಜಿತ ಮತ್ತು ವ್ಯವಸ್ಥಿತ ನೆಲೆಗಟ್ಟನ್ನು ಸ್ಥಾಪಿಸುವುದು ಅನಿವಾರ್ಯ ಮತ್ತು ಅವಶ್ಯಕವಾಗಿತ್ತು ಎಂಬುದು ವಿಲಿಯಂ ಚಾಪ್ಲಿನ್‌ರು ಅನುಸರಿಸಿದ ಕ್ರಮಗಳಿಂದ ಸ್ವತಂತ್ರವಾಗಿ ವಿಚಾರ ಮಾಡಿದ ನೆಲೆಯಲ್ಲಿ, ಚೆನ್ನಮ್ಮ (ದೇಸಾಯಿನಿಯರಲ್ಲಿ ಒಬ್ಬಳು) ಮತ್ತು ಅವಳ ದುಷ್ಟ ಸಲಹೆಗಾರರ ಸಂಚಿನ ಬಗ್ಗೆ ದೊರೆತ ಮಾಹಿತಿಯಿಂದ ಅವರಿಗೆ ಮನವರಿಕೆಯಾಗಿತ್ತು. ಮಿ. ಬಬರ್ ಹೇಳುವುದೇನೆಂದರೆ, ಚರ್ಚೆಯ ವಿಷಯವು ಬಂಡಾಯದ ಷಡ್ಯಂತ್ರವಾಗಿದೆ, ಸಾರ್ವಜನಿಕವಾಗಿ ಪ್ರಮಾಣೀಕರಿಸದೆ ಹೋದರೂ, ನಕಲಿ ದತ್ತು ಪಡೆದ ಈ ಬಾಲಕನೇ ಮುಂದಿನ ದೇಸಾಯಿ ಎಂದು ನೇಮಿಸಿರುವುದು ಈ ಕಿತ್ತೂರು ಬಂಡಾಯಕ್ಕೆ ಮೂಲ ಕಾರಣವಾಗಿದೆ. ಇದನ್ನು ಹೋಳಿ ಹಬ್ಬದಲ್ಲಿ ಪ್ರಯತ್ನಿಸಲಾಗುವುದು ಎಂಬುದಕ್ಕೆ ನನಗೆ ಯಾವುದೇ ಸಂಶಯವಿಲ್ಲ, ಉಮರಜ್‌ನ ಸ್ಥಳಾಂತರದಿಂದ ಈ ಭಾಗದಲ್ಲಿ ಬಂಡಾಯಗಾರರು ಆಶಿಸಿದ್ದ ಎಲ್ಲ ಮುಂದಿನ ದೊಂಬಿಗಳಿಗೆ ನಿರಾಶೆಯಾಯಿತು, ಸರಕಾರದ ಅಭಿಪ್ರಾಯವೇನೆಂದರೆ, ಬೆಳಗಾವಿಯಿಂದ ಕಿತ್ತೂರು ಕೇವಲ 25 ಮೈಲಿ ದೂರ ಇದ್ದು ಅದರ ಪ್ರದೇಶವು ಕೇವಲ 12 ಮೈಲಿ ದೂರ ಇರುವುದರಿಂದ ಕಿತ್ತೂರನ್ನು ಕೇವಲ ಭೀತಿಯಲ್ಲಿರಿಸುವ ಉದ್ದೇಶದಿಂದ ಕೇಂದ್ರಸ್ಥಾನವನ್ನು ಸ್ಥಳಾಂತರಿಸುವುದು ಅನೂಚಿತವಾಗಿದೆ, ಆದರೆ ಪ್ರಸ್ತುತ ಸಮಯಕ್ಕಾದರೂ ಆ ಪ್ರಾಂತ್ಯದಲ್ಲಿ ಒಂದು ಬಲಿಷ್ಠ ತುಕಡಿಯನ್ನು ಇರಿಸುವುದು

ಅಪೇಕ್ಷಣೀಯವಾದುದು, ಈ ವಿಷಯ ಕುರಿತು ಕರ್ನಲ್ ವಿಲ್ಲ್ಯೈರ್‌ನನ್ನು ಸಂಪರ್ಕಿಸಲು ಕಮಿಷನರ್ ಅವರಿಗೆ ಮನವಿ ಮಾಡಿದ್ದಾರೆ.

ಮಿ. ಚಾಪ್ಲಿನ್‌ರವರು ಪೊಲಿಟಿಕಲ್ ಏಜೆಂಟ್‌ರಿಂದ ಬಂದ ಪತ್ರವನ್ನು ರವಾನಿಸಿದ್ದಾರೆ, ಅದರಲ್ಲಿ ಕಿತ್ತೂರು ದೇಸಾಯಿ ಫಸ್ಲಿ 1833ರ ಪೇಶಕುಶ್ (ನಝರಾ)ದ ಬಾಕಿ ಇರುವ ಲೆಕ್ಕ ಕೂಡಾ ಇದೆ ಮತ್ತು ಆ ಸಮಯದಲ್ಲಿ ಕಿತ್ತೂರನ್ನು ವಶಪಡಿಸಿಕೊಂಡ ನಂತರ ಪಡೆದ ಸಂಪತ್ತಿನಿಂದ ನೀಡಬೇಕೆಂದು ಸೂಚಿಸಿದ್ದಾರೆ. ಈ ವಿಷಯಕ್ಕೆ ಸಂಬಂಧಿಸಿದಂತೆ ಸರಕಾರದ ಅಭಿಪ್ರಾಯವೇನೆಂದರೆ, ಇನ್ನೂ ಯಾರಾದರೂ ವಾರಸುದಾರರು ಇದ್ದರೆ ಮೊದಲು ಅವರನ್ನು ಸಮಾಧಾನಪಡಿಸಬೇಕು ಏಕೆಂದರೆ ಕಂದಾಯದ ಬಾಕಿ ಇರುವ ಮೊತ್ತದ ನಷ್ಟ ಭರ್ತಿಯ ಸಮನಾಗಿ ಪ್ರಾಂತವನ್ನು ಮುಟ್ಟುಗೋಲು ಹಾಕಲಾಗುವುದು.

49ನೇ ರೆಜಿಮೆಂಟ್ ಎಂ.ಎನ್.ಆಯ್ ಇದರ ಒಂದು ಭಾಗವು ಕಿತ್ತೂರಿನಲ್ಲಿಯ ಕೋಟೆ ಕಾವಲು ಪಡೆಯನ್ನು ಬಿಡುಗಡೆಗೊಳಿಸಿರುವುದನ್ನು ವರದಿ ಮಾಡುತ್ತ ಪೊಲಿಟಿಕಲ್ ಏಜಂಟ್‌ರು ತಿಳಿಸುವುದೇನೆಂದರೆ, "ಪ್ರತಿಕೂಲ ಲಕ್ಷಣಗಳ ಬಗ್ಗೆ ಯಾವುದೇ ಮಾಹಿತಿಯನ್ನು ಶಿರಸ್ತೆದಾರರಿಂದ ನನಗೆ ಬಂದಿಲ್ಲ, ಆದರೆ, ಕಿತ್ತೂರಿನ ಓರ್ವ ಗೌರವಾನ್ವಿತ ನಾಗರಿಕನಾದ ಲಿಂಗಪ್ಪಗೌಡನಿಂದ ನನಗೆ ಖಚಿತವಾಗಿ ಆಶ್ವಾಸನೆ ನೀಡಿದ್ದೇನೆಂದರೆ ಒಂದು ಬಲಿಷ್ಠವಾದ ಸೈನ್ಯ ಬಲದ ಅನುಪಸ್ಥಿತಿಯಲ್ಲಿ ಜನರಿಂದ ಕ್ಷೋಭೆ ಉಂಟಾಗುವ ಅಪಾಯವಿದೆ.

ಪೊಲಿಟಿಕಲ್ ಏಜೆಂಟರು ಈ ದಿನಾಂಕದಂದು (8ನೇ ಏಪ್ರಿಲ್ 1828) ಕಮಿಷನರ್‌ಗೆ ಬರೆದ ಪತ್ರದಲ್ಲಿ ತಮ್ಮ ಅಭಿಪ್ರಾಯವೆಂದು ಹೇಳಿದ್ದೇನೆಂದರೆ, ಗುರುಸಿದ್ದಪ್ಪನನ್ನು ಹೊರತುಪಡಿಸಿ, ಉಳಿದ ಎಲ್ಲ ಕಿತ್ತೂರಿನ ಕೈದಿಗಳನ್ನು ಪ್ರಾಂತದ ಶಾಂತಿ ಕದಡದಂತೆ, ತಮ್ಮ ಮುಂದಿನ ನಡುವಳಿಕೆಗಳ ಬಗ್ಗೆ ಅವರು ನೀಡಲು ಬಯಸುವ ತೃಪ್ತಿದಾಯಕ ಭದ್ರತೆಯೊಂದಿಗೆ ಬಿಡುಗಡೆಗೊಳಿಸಬೇಕು ಮತ್ತು ಮಿ. ಚಾಪ್ಲಿನ್ ಈ ಕ್ರಮವನ್ನು ಶಿಫಾರಸ್ಸು ಮಾಡಿದ ನಂತರ, ಸರಕಾರವು ಇದನ್ನು ಅನುಮೋದಿಸಿದೆ. "ನಾನು ಗುರುಸಿದ್ದಪ್ಪನನ್ನು ಹೊರತುಪಡಿಸಿ (ಮಿ. ಬಬೇರ್ ನಿರೀಕ್ಷಿಸುವಂತೆ) ಅವನ ಅಪಾಯಕಾರಿ ನಡುವಳಿಕೆಯಿಂದಾಗಿ, ನಾನು ಕೊಲ್ಹಾಪುರದಲ್ಲಿ ಇಲ್ಲದಿದ್ದಾಗ ನಡೆದ ಘಟನೆಯಿಂದ ನನಗೆ ಮನವರಿಕೆಯಾಗಿದ್ದೇನೆಂದರೆ, ಎಂದಿನಂತೆ ಇತನೊಬ್ಬನೇ ಒಳಸಂಚಿನ ಅವಕಾಶವನ್ನು ಕಾಯುವ ವ್ಯಕ್ತಿಯಾಗಿದ್ದಾನೆ.

ಪೊಲಿಟಿಕಲ್ ಏಜೆಂಟ್ ಈ ದಿನಾಂಕದಂದು (20ನೇ ನವೆಂಬರ್ 1828) ಕಿತ್ತೂರು ಪ್ರಾಂತವನ್ನು ವಶಪಡಿಸಿಕೊಂಡಾಗಿನಿಂದ ಜೊತೆಗೆ ಹಿಂದಿನ ವರ್ಷಗಳ ವಾರ್ಷಿಕ ಕಂದಾಯದ ಹೋಲಿಕೆಯ ವರದಿಯನ್ನು ಸಲ್ಲಿಸಿದ್ದಾನೆ. ಈ ವರದಿಯು, ಅವನಿಗೆ ತಿಳಿಸಿದಂತೆ ಹಾಗೆ ಇದು ಸರಕಾರಕ್ಕೆ ಬಹಳ ತೃಪ್ತಿದಾಯಕವಾಗಿದೆ, ಕಂಪನಿಯು ಈ ಪ್ರಾಂತವನ್ನು ವಶಪಡಿಸಿಕೊಂಡ ಮೂರು ವರ್ಷಗಳ ಕಂದಾಯದ ದುರ್ಬಳಕೆಯನ್ನು ತೋರಿಸುತ್ತದೆ. ಒಟ್ಟಾರೆ ಮೂರು ವರ್ಷಗಳಿಗೆ ಹೋಲಿಸಿದರೆ ಅದು ರೂ. 1,84,005–22 ಇದೆ. ಇಲ್ಲಿ ಗಮನಿಸಬೇಕಾದ ಅಂಶವೇನೆಂದರೆ ವ್ಯತ್ಯಾಸವು ಎರಡು ಬೇರೆ ಲೆಕ್ಕಗಳಲ್ಲಿ ಅಂದರೆ ಫಸಲಿ 1235, 36 ಮತ್ತು 37 ಎಂದು ಮೊದಲಿನ ಲೆಕ್ಕದಲ್ಲಿ ಮತ್ತು ಫಸಲಿ 1195, 1202 ಹಾಗೂ 1232 (ಫಸ್ಲೀ ವರ್ಷವನ್ನು ಕ್ರಿಸ್ತ ಶಕಕ್ಕೆ ಪರಿವರ್ತಿಸಲು ಇದಕ್ಕೆ 590ನ್ನು ಕೂಡಿಸಬೇಕು) ಎಂದು ನಂತರದ ಲೆಕ್ಕದಲ್ಲಿ ಇದೆ, ಆವಾಗ ಕಿತ್ತೂರು ಕ್ರಮವಾಗಿ ಟಿಪ್ಪು ಸುಲ್ತಾನ್ ಮತ್ತು ಪೇಶ್ವೆಗಳ ಆಳ್ವಿಕೆಗೆ ಒಳಪಟ್ಟಿತ್ತು. ಕಂಪನಿ ಆಳ್ವಿಕೆಯಲ್ಲಿನ ಮೂರು ವರ್ಷಗಳ ಸಂಭಾವ್ಯ ಕಂದಾಯವು ಪ್ರಗತಿಶೀಲ ಏರಿಕೆಯನ್ನು ತೋರಿಸುತ್ತದೆ.

18ನೇ ಏಪ್ರಿಲ್ 1829ರಂದು ಪೊಲಿಟಿಕಲ್ ಏಜೆಂಟ್ ದಿನಾಂಕ 2ನೇ ಫೆಬ್ರುವರಿಯಂದು ಚೆನ್ನಮ್ಮಳ ನಿಧನದ ಸುದ್ದಿಯನ್ನು ವರದಿ ಮಾಡಿದನು. ಅವಳು ಕಿತ್ತೂರಿನ ಕೊನೆಯ ದೇಸಾಯಿಯ ಮಲತಾಯಿಯಾಗಿದ್ದಳು ಮತ್ತು ತನ್ನ ಸೊಸೆ ಜಾನಕಿಬಾಯಿಯೊಂದಿಗೆ ವಾರ್ಷಿಕ ಹತ್ತು ಸಾವಿರ ರೂಪಾಯಿಗಳ ಪಿಂಚಣಿಯನ್ನು ಪಡೆಯುತ್ತಿದ್ದಳು ಹಾಗೂ ಅವನ ಶಿಫಾರಸ್ಸಿನ ಮೇರೆಗೆ ಸರಕಾರವು ಪಿಂಚಣಿಯ ಆ ಹಣವನ್ನು ಈಗ ಜೀವಿತವಿರುವ ಮಹಿಳೆಗೆ ಮುಂದುವರಿಸಿದೆ.'' ಈ ಪತ್ರವು ಕಿತ್ತೂರಿನ ದಂಗೆಯ ಬಗೆಗೆ ಸಾಮಾನ್ಯವಾಗಿ ಜನಮಾನಸದಲ್ಲಿರುವ ಕೆಲವು ಅಂಶಗಳನ್ನು ಪ್ರಶ್ನಿಸುವ ಮನಃಸ್ಥಿತಿಗೆ ನಮ್ಮನ್ನು ಕೊಂಡೊಯ್ಯುತ್ತದೆ. ಸಂಪೂರ್ಣವಾಗಿ ಬ್ರಿಟಿಷರು ಕಿತ್ತೂರಲ್ಲಿ ನಿಯಂತ್ರಣ ಸಾಧಿಸಿದರು. ನಂತರ, ಕಿತ್ತೂರು ಕೋಟೆ ತಮ್ಮ ಸೈನಿಕ ನೆಲೆಯನ್ನಾಗಿಸುವ ಪ್ರಯತ್ನ ಮಾಡಿದರು, ಕೊನೆಗೆ ಅದು ಸೂಕ್ತ ಸ್ಥಳ ಅಲ್ಲವೆಂದು ಬೆಳಗಾವಿ ಕೋಟೆಯನ್ನು ಆಯ್ಕೆ ಮಾಡಿಕೊಂಡರು. ಮುಂದಿನ ಬಂಡಾಯಗಾರರಿಗೆ ಆಶ್ರಯ ತಾಣವಾಗಬಾರದು ಎಂಬ ಕಾರಣಕ್ಕೆ ಕಿತ್ತೂರು ಕೋಟೆಯನ್ನು ನೆಲಸಮಗೊಳಿಸಿದರು.

**ಸಮಾರೋಪ:**

ವಸಾಹತುಶಾಹಿ ಕಾಲೀನ ದಾಖಲೆಗಳು ಸ್ಥಳೀಯ ಪ್ರಭುತ್ವಗಳು ಮತ್ತು ಸಮಾಜವನ್ನು ರೂಪಿಸುವಲ್ಲಿ ತಟಸ್ಥವಾಗಿರಲಿಲ್ಲ ಎಂಬುದನ್ನು ಸ್ಪಷ್ಟಪಡಿಸುತ್ತವೆ. ಅವು ವಸಾಹತುಶಾಹಿ ಅಧಿಕಾರದ ದೃಷ್ಟಿಕೋನವನ್ನು ಪ್ರಧಾನವಾಗಿ ಪ್ರತಿಬಿಂಬಿಸಿ, ಸ್ಥಳೀಯ ಆಡಳಿತ ವ್ಯವಸ್ಥೆಗಳು, ಸಂಪ್ರದಾಯಗಳು ಮತ್ತು ಜನರ ಅನುಭವಗಳನ್ನು ಅಂಚಿಗೆ ತಳ್ಳಿದವು. ಆದರೂ ಈ ದಾಖಲೆಗಳನ್ನು ವಿಮರ್ಶಾತ್ಮಕವಾಗಿ ಅಧ್ಯಯನ ಮಾಡುವ ಮೂಲಕ ಸ್ಥಳೀಯ ಆಡಳಿತಗಾರರು ಮತ್ತು ಸಮುದಾಯಗಳು ವಸಾಹತುಶಾಹಿ ಶಕ್ತಿಯೊಂದಿಗೆ ನಡೆಸಿದ ಪ್ರತಿರೋಧ, ಸಂಧಾನ ಮತ್ತು ಸಹಕಾರದ ಸೂಕ್ಷ್ಮ ಅಂಶಗಳನ್ನು ಗುರುತಿಸಲು ಸಾಧ್ಯವಾಗುತ್ತದೆ. ವಸಾಹತುಶಾಹಿ ದಾಖಲೆಗಳ ಮಿತಿಗಳನ್ನು ಅರಿತುಕೊಂಡು ಸ್ಥಳೀಯ ಮೂಲಗಳು, ಮೌಖಿಕ ಪರಂಪರೆಗಳು ಮತ್ತು ಪರ್ಯಾಯ ದಾಖಲೆಗಳನ್ನು ಸಮನ್ವಯಗೊಳಿಸುವ ಅಗತ್ಯವಿದೆ ಎಂದು ಈ ಲೇಖನದ ಮೂಲಕ ತಿಳಿಸಲು ಪ್ರಯತ್ನಿಸಲಾಗಿದೆ.

**ಪರಾಮರ್ಶನ ಗ್ರಂಥಗಳು:**

1. ಎ. ಬಿ.ವಗ್ಗರ (ಸಂ), ಕಿತ್ತೂರು ಸಂಸ್ಥಾನ ದಾಖಲೆಗಳು: ಸಂಪುಟ-2., ಪ್ರಸಾರಾಂಗ ಬಸವರಾಜ ಕಟ್ಟೀಮನಿ ಪ್ರತಿಷ್ಠಾನ, ಬೆಳಗಾವಿ. 2022.
2. ರಾಜಕೀಯ ದಾಖಲೆಗಳು 1824-1831

**Funding:**

This study was not funded by any grant.

**Conflict of interest:**

The Authors have no conflict of interest to declare that they are relevant to the content of this article.

**About the License:**

© The Authors 2024. The text of this article is open access and licensed under a Creative Commons Attribution 4.0 International License.